ಶ್ರೀ ಜೆ. ಹೆಚ್. ಪಟೇಲ್ (ವಿದ್ಯುತ್ ಮತ್ತು ಕೈಗಾರಿಕಾ ಸಚಿವರು).—

ಅ) ಶೀಘ್ರಗತಿಯಲ್ಲಿ ಕೆಲಸ ನಡೆದಿದೆ.

ಆ) ಒಂದೇ ಒಂದು ಗ್ರಾಮಕ್ಕೆ ಈ ಸೌಲಭ್ಯ ಒದಗಿಲ್ಲ.

ಇ) ೧೯೮೪-೮೫ರ ಸಾಲಿನಲ್ಲಿ ೨೩ ಗ್ರಾಮಗಳಿಗೂ ೧೯೮೫-೮೬ರ ಸಾಲಿನಲ್ಲಿ ೧೩ ಗ್ರಾಮಗಳಿಗೂ ವಿದ್ಯುತ್ ಸೌಲಭ್ಯವನ್ನು ನೀಡಲಾಗಿದೆ.

ಶ್ರೀ ಜಿ. ರಾಮೋದಾಸ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಒಂದೇ ಒಂದು ಗ್ರಾಮಕ್ಕೆ ಈ ಸೌಲಭ್ಯ ಒದಗಿಲ್ಲವೆಂದು ಇದೆ. ಎರಡು ವರ್ಷಗಳಿಂದ ಮಾಡದಕೆರೆ ಹೋಬಳಿ, ದೇವರ ಹಳ್ಳಿ ಮುಂತಾದ ಗ್ರಾಮಗಳಲ್ಲಿ ಕಂಬಗಳನ್ನು ತಂದು ಹಾಕಿದ್ದಾರೆ. ಆದರೆ ಇವತ್ತಿನವರೆಗೂ ಯಾವ ಕೆಲಸಗಳನ್ನೂ ಪ್ರಾರಂಭ ಮಾಡಿಲ್ಲ. ಆದಷ್ಟು ಬೇಗ ಸರಕಾರ ಇದನ್ನು ಮಾಡಿಸಿಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾಡಿಸಿಕೊಡುತ್ತೇನೆ.

ಪ್ರಶ್ನೆ ಸಂಖ್ಯೆ. ೧೬೯(೩೨೧)
(ಮಾನ್ಯ ಸದಸ್ಯರು ಗೈರು ಹಾಜರು)
ಪ್ರಶ್ನೆ ಸಂಖ್ಯೆ. ೧೭೦(೬೪೭)
(ಮಾನ್ಯ ಸದಸ್ಯರು ಗೈರು ಹಾಜರು)

ಚಿಂಚೋಳಿ ತಾಲ್ಲೂಕಿನ ಶಹಬಾದ್ ಕ್ವಾರಿ ಲೀಸುಗಳ ಬಗ್ಗೆ

೫೭೭. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂ-ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಶಹಬಾದ್ ಶಿಲೆಯ ಕ್ವಾರಿ ಲೀಸುಗಳ ಸಂಖ್ಯೆ.

ಆ) ಇವುಗಳಲ್ಲಿ ನಿಯಮಾನುಸಾರ ಎಷ್ಟು ಗಣಿಗುತ್ತಿಗೆಗಳನ್ನು ಹೊಂದಿದ್ದಾರೆ ಮತ್ತು ಅನಧಿಕೃತವಾಗಿ ಕ್ವಾರಿ ಮಾಡುತ್ತಿರುವ ಸಂಖ್ಯೆ ಎಷ್ಟು,

ಇ) ಅನಧಿಕೃತ ಕ್ವಾರಿಯೆಂದು ತಡೆಗಟ್ಟಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ?

ಶ್ರೀ ಜೆ. ಎಸ್. ದೇಸ್‌ಮುಖ್ (ಅರಣ್ಯ, ಗಣಿ ಮತ್ತು ಭೂ-ವಿಜ್ಞಾನ ಇಲಾಖಾ ಸಚಿವರು).—

ಅ) ೪೮.

ಆ) ಎಲ್ಲಾ ೪೮ ಲೀಸುಗಳೂ ಕರ್ನಾಟಕ ಉಪ-ಖನಿಜ ರಿಯಾಯಿತಿ ನಿಯಮಾವಳಿ ೧೯೬೯ರ ಮೇರೆಗೆ ಮಂಜೂರು ಮಾಡಲಾಗಿದೆ.

ಇ) ಯಾವುದೇ ರೀತಿಯ ಅಕ್ರಮ ಗಣಿಗಾರಿಕೆ ಕಂಡು ಬಂದಲ್ಲಿ ಅದನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಗಣಿಗುತ್ತಿಗೆದಾರರನ್ನು ಹಿಡಿದು ಅವರು ತೆಗೆದಿರುವ ಕಲ್ಲಿನ ಮೇಲೆ ರಾಜಧನ ಮುಂತಾದುವನ್ನು ಇಲಾಖೆಯಿಂದ ಲೆಕ್ಕ ಹಾಕಿ ವಸೂಲು ಮಾಡಲಾಗುತ್ತದಲ್ಲದೆ ಅವರು ಸಕ್ರಿಯವಾಗಿ ಗಣಿಗುತ್ತಿಗೆ ಪಡೆಯುವಂತೆ ಒಡಂಬಡಿಸಲಾಗುವುದು. ಹಾಗೂ ೧೯೬೯ರ ಕರ್ನಾಟಕ ಖನಿಜ ರಿಯಾಯಿತಿ ನಿಯಮಾವಳಿಗಳಿಗನುಸಾರ ತಪ್ಪಿಸ್ಥರನ್ನು ಹಿಡಿದು ಶಿಕ್ಷೆಗೊಳಪಡಿಸುವಂತೆ ನಿರ್ದೇಶಕರಿಗೆ ಆದೇಶವೀಯಲಾಗಿದೆ.

ಶ್ರೀ ಎಂ. ವೀರಯ್ಯಸ್ವಾಮಿ.—ನಾನು ಈ ಪ್ರಶ್ನೆಯನ್ನು ಕೇಳಿದ ಉದ್ದೇಶ ಏನೆಂದರೆ ನಮ್ಮ ತಾಲ್ಲೂಕಿನಲ್ಲಿ ಲೀಗಲ್ ಲೀಸ್ ಇರುವುದಕ್ಕಿಂತಲೂ ಇಲ್ಲೀಗಲ್ ಆಗಿ ಅಲ್ಲಿ ಕಾರ್ಯ ನಡೆಯುತ್ತಿದೆ. ನಾನು ಗುಲ್ಬರ್ಗ ಜಿಯಾಲಜಿಸ್ಟ್ ಆಫೀಸಿನಲ್ಲಿ ಕೇಳಿದಾಗ ಇಲ್ಲೀಗಲ್ ಕ್ವಾರಿ ಯಾರು ನಡೆಸುತ್ತಿದ್ದಾರೆ ಅವರಿಗೆ ೫-೬ ಲಕ್ಷ ರೂಪಾಯಿಯಷ್ಟು ದಂಡ ವಿಧಿಸುತ್ತಿದ್ದೇವೆಂದು ಹೇಳಿದರು. ಆದರ ಬಗ್ಗೆ ಯಾವುದೂ ಹಣ ಕಟ್ಟಿಲ್ಲ. ಆದರ ಬಗ್ಗೆ ಯಾವ ಡೀಟೈಲ್ಸ್ ಮಾನ್ಯ ಮಂತ್ರಿಗಳ ಉತ್ತರದಲ್ಲಿ ಇಲ್ಲ. ತಮ್ಮಲ್ಲಿ

ಸತ್ಯಾಂಶ ಹೇಳಬೇಕೆಂದರೆ, ನಮ್ಮ ಚಿಂಚೋಳಿ ತಾಲ್ಲೂಕಿನಲ್ಲಿ ಮಿರಿಯಾ ಎಂಬ ಒಂದೇ ಒಂದು ಗ್ರಾಮ ಇದೆ. ಅಲ್ಲಿ ೫೦ ಕ್ವಾರಿ ಕೆಲಸ ನಡೆಯುತ್ತವೆ, ಅವುಗಳಲ್ಲಿ ೧೫ಕ್ಕೆ ಮಾತ್ರ ಲೀಸ್ ಇದೆ. ಒಂದು ಎಕರೆಗೆ ೫ ಸಾವಿರ ರೂಪಾಯಿ ಕ್ವಾರಿ ಲೀಸ್ ಆಗಿರುವುದರಿಂದ. ಅಲ್ಲಿರತಕ್ಕ ಅಧಿಕಾರಿಗಳಿಗೆ ಒಂದು ಸಾವಿರ ರೂಪಾಯಿ ಕೊಟ್ಟು ಕ್ವಾರಿ ಕೆಲಸ ಮಾಡುತ್ತಿದ್ದಾರೆ. ಇದು ಆಗಲಿಕ್ಕೆ ಲಂಚ ಮುಖ್ಯ ಕಾರಣ. ಅಲ್ಲದೆ, ಈ ಕ್ವಾರಿ ಮಿನಿಮಮ್ ಚಾರ್ಜಸ್ ೫ ಸಾವಿರ ರೂಪಾಯಿ ಮಾಡಿರುವುದು ಹೀಗೆ ಮಾಡಲು ಒಂದು ಕಾರಣವಾಗಿದೆ. ಇದರ ಬಗ್ಗೆ ಸರ್ಕಾರ ಏನು ಉತ್ತರ ಹೇಳುತ್ತದೆ ?

ಶ್ರೀ ಜೆ. ಎಸ್. ದೇಶ್‌ಮುಖ್. — ಸಾಮಾನ್ಯವಾಗಿ ಅನಧಿಕೃತವಾಗಿ ಸಣ್ಣ ಸಣ್ಣ ಕಸಬುದಾರರು ಮಾಡುತ್ತಿರುತ್ತಾರೆ, ಕೆಲವು ಸಂದರ್ಭಗಳಲ್ಲಿ ರೈಡ್ ಮಾಡಿದಾಗ ಅವರು ಕಣ್ಮರೆಯಾಗುತ್ತಾರೆ. ಇನ್ನು ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತೇವೆ. ಅಲ್ಲದೆ, ಈ ಬಗ್ಗೆ ತಕ್ಷಣ ಒಂದು ಕಾಯಿದೆ ತರಬೇಕೆಂದು ಮಾಡಿದ್ದೇವೆ. ಅದನ್ನು ಅದಷ್ಟು ಬೇಗ ತರುತ್ತೇವೆ.

ಶ್ರೀ ಎಂ. ವೀರಯ್ಯಸ್ವಾಮಿ. — ಈಗಾಗಲೇ ಅಲ್ಲಿ ಇಲ್ಲೀಗಲ್ ಕ್ವಾರೀಸ್ ಎಷ್ಟು ಇವೆ ಅದರ ಬಗ್ಗೆ ನನ್ನ ಹತ್ತಿರ ಲಿಸ್ಟ್ ಇದೆ, ಅದರ ಬಗ್ಗೆ ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಜೆ. ಎಸ್. ದೇಶ್‌ಮುಖ್. — ಮಾನ್ಯ ಸದಸ್ಯರು ಲಿಸ್ಟ್ ಕಳುಹಿಸಿಕೊಟ್ಟರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ. — ಅಧ್ಯಕ್ಷರೆ, ಇದು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಚಾರ ಇದೆ. ಚಿಂಚೋಳಿ ತಾಲ್ಲೂಕಿನ ಶಹಬಾದ್ ಶಿಲೆಯ ಕ್ವಾರಿ ಬಗ್ಗೆ ಪ್ರಾಬ್ಲೆಮ್ ಇದೆ, ಈಗ ಒಂದು ಎಕರೆಗೆ ೫ ಸಾವಿರ ಮಾಡಿರುವುದರಿಂದ ಅನೇಕ ಜನ ಇಲ್ಲೀಗಲ್ ಆಗಿ ಕ್ವಾರಿ ಮಾಡುತ್ತಿದ್ದಾರೆ, ಆದ್ದರಿಂದ, ಈ ರೀತಿ ಹೆಚ್ಚು ಮಾಡಿರುವುದು ಕಡಿಮೆ ಮಾಡಬೇಕು. ಈಗ ಪರ್‌ಮಿಷನ್ ತೆಗೆದುಕೊಳ್ಳುವವರು ಒಂದು ಕ್ವಾರಿಗೆ ಮಾತ್ರ ಪರ್‌ಮಿಷನ್ ತೆಗೆದುಕೊಂಡು ೫ ಸಾವಿರ ರೂಪಾಯಿ ತುಂಬುತ್ತಾರೆ, ಅನಂತರ ಉಳಿದ ನಾಲ್ಕೈದು ಕಡೆಗಳಲ್ಲಿ ಇಲ್ಲೀಗಲ್ ಆಗಿ ಮಾಡುತ್ತಿರುತ್ತಾರೆ. ಆದರೆ ಅಲ್ಲಿಗೆ ಅವರು ದುಡ್ಡು ತುಂಬಿರುವುದಿಲ್ಲ. ಈ ತರಹ ಆಗತಕ್ಕ ಇಲ್ಲೀಗಲ್ ಟ್ರಾನ್ಸ್‌ಕ್ಷನ್ ನಿಲ್ಲಿಸಲಿಕ್ಕೆ ಏನು ಮಾಡುತ್ತೀರಾ ? ಹಿಂದೆ ೧೯೭೪ರಲ್ಲಿ ೧೦೦–೨೦೦ ಎಕರೆವರೆಗೆ ಲೀಸ್ ತೆಗೆದುಕೊಳ್ಳಬಹುದಾಗಿತ್ತು. ಅದಕ್ಕೆ ಯಾವುದೇ ಒಂದು ಲಿಮಿಟ್ ಇರಲಿಲ್ಲ. ಈಗ ಆದರ ಬಗ್ಗೆ ರೆಡ್ಯೂಸ್ ಮಾಡಿ ಒಂದು ಕಿಲೋಮೀಟರ್ ಎಂದು ಲಿಮಿಟ್ ಹಾಕಿದ್ದಾರೆ. ಇದರಿಂದ ಮಾನಾಪಲಿಸ್ಟ್‌ಗಳಿಗೆ ಅವಕಾಶ ಸಿಕ್ಕಿ, ಜಿನಿಯಸ್ ಆಗಿ ಒಂದು ಎಕರೆ ತೆಗೆದುಕೊಂಡು ಮಾಡುವವರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ, ಅಂತಹವರಿಗೆ ಕನಿಷ್ಠ ತೋರಿಸಬೇಕಾಗಿದೆ. ಇಲ್ಲೀಗಲ್ ಆಗಿ ಮಾಡತಕ್ಕವರಿಗೆ ಶಿಕ್ಷೆ ಮಾಡಬೇಕಾಗಿದೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಜೆ. ಎಸ್. ದೇಶ್‌ಮುಖ್. — ಮಾನ್ಯ ಸದಸ್ಯರಾದ ಖರ್ಗೆಯವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ೫ ಸಾವಿರ ರೂಪಾಯಿಗೆ ಏನ್‌ಹ್ಯಾನ್ಸ್ ಮಾಡಿರುವುದು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ, ಲೀಸ್ ಕಡಿಮೆ ಮಾಡುವ ಬಗ್ಗೆ ವಿಚಾರ ಪ್ಲಿಪಾಡುತ್ತೇನೆ. ಇನ್ನು ಅಕ್ರಮವಾಗಿ ಮಾಡುವವರು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್. — ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಯಾವರೀತಿ ಇದೆ ಎಂದರೆ, ಅವರ ಮೊದಲನೆಯ ಪ್ರಶ್ನೆ ಕನ್ನಡದಲ್ಲಿ ಅಚ್ಚಾಗಿರತಕ್ಕದ್ದು, (ಆ) ಚಿಂಚೋಳಿ ತಾಲ್ಲೂಕಿನಲ್ಲಿರುವ ಶಾಹಬಾದ್ ಕಲ್ಲುಬಂಡೆಗಳ ಸಂಖ್ಯೆ ಎಷ್ಟು ಎಂದು ಇದೆ. ಇದಕ್ಕೆ ಯಾರು ಉತ್ತರ ಹೇಳಲಿಕ್ಕೆ ಆಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಅಧ್ಯಕ್ಷರೆ, ಇಂಗ್ಲೀಷ್ ಪ್ರತಿಯಲ್ಲಿ ಸರಿಯಾಗಿದೆ, ಕನ್ನಡದಲ್ಲಿ ಪ್ರಿಂಟ್ ಮಾಡುವಂಥ ಸಂದರ್ಭದಲ್ಲಿ ತಪ್ಪಾಗಿರಬೇಕು.